## ಕವಿತೆ




**ಶೂದ್ರ ಶ್ರೀನಿವಾಸ್**

ಕಲೆ: ವಿ.ಎಂ. ಮಂಜುನಾಥ್


# ಒಂದು ಕೂಗು

ಶೂನ್ಯದಲ್ಲಿ ಎಷ್ಟೊಂದು ಹುಡುಕುವುದು
ಏನೂ ಗೋಚರಿಸುತ್ತಿಲ್ಲ ,
ಆದರೆ ಎಲ್ಲಾ ಕಡೆ ಶಬ್ದ ಬಾಹುಳ್ಯ
ವ್ಯಾಪಿಸಿದೆ, ಮನೋಲೋಕದಲ್ಲಿ
ಅರ್ಥ ಅನರ್ಥಗಳ ವಿವರಿಸಲಾಗದ
ಜಾಡು ಹಿಡಿದು ಮುಂದೆ ಸಾಗುತ್ತಲೇ
ಇದ್ದೇನೆ ಯಾರ್‍ಯಾರದೋ ಕೂಗು
ಹಿಂದೆ ಬಾ ಮುಂದೆ ಹೋಗಬೇಡ
ಕಾದಿದೆ ಎಂಥದೋ ಭೂತಾರಾಧನೆ
ಅಲ್ಲಿರುವುದು ಚಿತ್ರಹಿಂಸೆಯ ವಿವಿಧ
ರೂಪಗಳ ನರಕ ಯಾತನೆ.

ಹೌದು ಬಹುದೂರ ಸಾಗಿಬಂದಿದ್ದೇನೆ
ಕವಲು ದಾರಿ ಹುಡುಕಲು ಹೊರಟರೆ
ಅವ್ಯಕ್ತ ಆರ್ತ ಧ್ವನಿಯ ಅಗಣಿತ ಕೂಗು
ವ್ಯಥೆ ,ವ್ಯಸನ ,ಆಲಾಪ ಅದಕ್ಕೆ
ಮಿಡಿಯುವ ಎಂತೆಂಥದೋ ವಾದ್ಯಗಳ
ವೇದನೆಯ ಅನಾಥ ನಾದ
ಆದರೆ ನಕ್ಷತ್ರಗಳು ಮಾತ್ರ ಮಿನುಗುತ್ತಿವೆ
ನೋಡು ನಮ್ಮದು ಪ್ರಶಾಂತ ಬೆಳಕು
ಗೊತ್ತಿಲ್ಲ ಎಂದಿನಿಂದ ಇಲ್ಲಿ
ಅಂಟಿಕೊಂಡಿದ್ದೇವೋ ಯಾರೂ
ಹೇಳುವವರಿಲ್ಲ ಹೀಗೆಯೇ ಇರುತ್ತೇವೆ
ಎಂಬ ಭರವಸೆ ಇಲ್ಲ ಯಾರಿಗೆ ಗೊತ್ತು
ಆಕಾಶ ಕಳಚಿ ಬೀಳಬಹುದು
ಮನುಷ್ಯರ ನೀಚತನದ ಮೊತ್ತಕ್ಕೆ.

